ಮಾತ್ರ ಇದೆ. ಅವರು 45 ದಿವಸಗಳ ಹಿಂದೆ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದರು. ಅವರು ಮುಷ್ಕರ ನೋಟೀಸ್ ಅನ್ನು ಕೊಟ್ಟಿದ್ದಾರೆ. 72 ಗಂಟೆಗಳಲ್ಲಿ ಮುಂದುವರೆಯುವಂತಹ ಅವರ ಮುಷ್ಕರದಿಂದ ರಾಜ್ಯ ಕತ್ತಲಾಗುತ್ತದೆ, ಮತ್ತು ಉತ್ಪಾದನೆಯ ಮೇಲೆ ನೇರ ಪರಿಣಾಮವಾಗುತ್ತದೆ. ಇದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ತಾವು ಅವರನ್ನು ಕರೆಯಿಸಿ ಮಾತನಾಡುವಂತಹ ಏನಾದರೂ ಯೋಜನೆ ಮಾಡಿದ್ದಿರಾ? ಅವರ ಬೇಡಿಕೆಗಳನ್ನು ತಾವು ಬೆಂಬಲಿಸುತ್ತಿರೋ ಇದಕ್ಕೆ ಪರ್ಯಾಯ ವ್ಯವಸ್ಥೆ ಏನಾದರೂ ಮಾಡಿದ್ದೀರೋ? ಅವರು ಮುಷ್ಕರ ಮಾಡುವುದು ಉಚಿತವಾದರೆ, ವಿದ್ಯುತ್ ಉತ್ಪಾದನೆಗೆ ಧಕ್ಕೆಯಾಗಬಾರದು, ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಉತ್ಪಾದನಾ ಕಾರ್ಯವನ್ನು ನೋಡಿಕೊಳ್ಳುವುದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಿ ಎಂದು ಆಡಳಿತ ವರ್ಗದವರಿಗೆ ತಿಳಿಸುತ್ತಾ ವಿದ್ಯುತ್ ಉತ್ಪಾದನೆಯ ಎಲ್ಲಾ ಯಂತ್ರಗಳನ್ನು ಸುಸ್ಥಿತಿಯಲ್ಲಿ ಇಟ್ಟು ಅವರು ಮುಷ್ಕರವನ್ನು ಆರಂಭಿಸಿದ್ದಾರೆ. ಅವರು ಮುಷ್ಕರದಲ್ಲೂ ಒಂದು ನಿಯತ್ತನ್ನು ಅನುಸರಿಸುತ್ತಿದ್ದಾರೆ. ದಯಮಾಡಿ ಈ ರಾಜ್ಯದ ಹಿತದೃಷ್ಟಿಯಿಂದ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ. ಈ ರೀತಿ ವಿದ್ಯುತ್ ಅಪಾಯದಲ್ಲಿರುವಂತಹ ಸಂದರ್ಭದಲ್ಲಿ ಮತ್ತೊಮ್ಮೆ ಉತ್ಪಾದನೆಯ ಮೇಲೆ ಹೊಡೆತ ಬೀಳಬಾರದೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತಾ ಅವರನ್ನು ತಕ್ಷಣ ಮಾತುಕತೆಗೆ ಕರೆಯಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪವರ್ ಕಾರ್ಪೊರೇಷನ್ ಇಂಜಿನೀಯರ್ ಅಸೋಸಿಯೇಷನ್, ಟ್ರೇಡ್ ಯೂನಿಯನ್ ಅಲ್ಲ. ಅವರು ಬಹಳ ಜವಾಬ್ದಾರಿಯುತವಾದಂತಹ ಅಧಿಕಾರಿಗಳು, ಇಲ್ಲಿಯವರೆಗೆ ಯಾವುದೇ ಸಂದರ್ಭದಲ್ಲೂ ಕಾರ್ಪೊರೇಷನಗೆ ಅಡ್ಡಿಯಾಗುವಂತಹ ಧಕ್ಕೆಯಾಗುವಂತಹ ಕೆಲಸವನ್ನು ಮಾಡಿಲ್ಲ. ಈಗ ಅವರ ಬೇಡಿಕೆಗಳು ಏನು ಎಂಬುದು ನನಗೆ ಸಂಪೂರ್ಣವಾಗಿ ಗೊತ್ತಿಲ್ಲ. ಆದರೆ ನಾನು ಎಂ.ಡಿ. ಯವರಿಗೆ ಹೇಳಿದ್ದೇನೆ. ಅವರನ್ನು ಕರೆಯಿಸಿ ಮಾತನಾಡಿ, ಅವಶ್ಯಕತೆ ಏನಾದರೂ ಇದ್ದರೆ ನಾನು ಮಧ್ಯೆ ಪ್ರವೇಶ ಮಾಡಬೇಕಾದಲ್ಲಿ ಬರುತ್ತೇನೆಂದು ಹೇಳಿದ್ದೇನೆ. ಅವರು ಇದಕ್ಕೆ ಒಪ್ಪಿಕೊಂಡು ಹೋಗಿದ್ದಾರೆ.

(ಎ) ನ್ಯಾಷನಲ್ ಹೈವೆ ನಂ.17ರಲ್ಲಿ ಬರುವ ಶರಾವತಿ ಸೇತುವೆ ಮೇಲೆ 10 ಟನ್ ಭಾರದ ವಾಹನಗಳ ಓಡಾಟಕ್ಕೆ ಅನುವು ಮಾಡುವ ಕುರಿತು.

ಡಾ: ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಅಧ್ಯಕ್ಷರೆ, ಶರಾವತಿ ಸೇತುವೆ ನ್ಯಾಷನಲ್ ಹೈವೇ ನಂ.17 ಇದು ಕೇರಳ, ಮುಂಬೈ, ಮಹಾರಾಷ್ಟ್ರ ಮತ್ತು ಸೂರತ್‌ವರೆಗೆ ಹೊಂದಿರುವಂತಹ ಸೇತುವೆಯಾಗಿದೆ. ಆರು ವರ್ಷಗಳ ಹಿಂದೆ ಈ ಸೇತುವೆ ವಾಹನಗಳ ಸಂಚಾರಕ್ಕೆ ಅಪಾಯಕಾರಿಯಾಗದೆ ಎಂದು ಸರ್ಕಾರ ಘೋಷಣೆ ಮಾಡಿತ್ತು. ಆದಾದನಂತರ ಸರ್ಕಾರ ಸಾರ್ವಜನಿಕರಿಗೆ ತೊಂದರೆಯಾಗುವಂತೆ ಕೆಲಸ ಮಾಡಿಕೊಂಡು ಬಂದಿದೆ. ಈ ಸೇತುವೆ ಮೇಲೆ ಪ್ರಾರಂಭದಲ್ಲಿ ಯಾವುದೇ ವಾಹನಗಳ ಸಂಚಾರವನ್ನು ನಿಷೇದಿಸಿತ್ತು. ನಂತರ ಲಘು ವಾಹನಗಳನ್ನು ಅದರ ಮೇಲೆ ಹೋಗುವುದಕ್ಕೆ

ಅನುಕೂಲ ಮಾಡಿಕೊಟ್ಟಿತು. ಭಾರೀ ವಾಹನಗಳಿಗೆ ಮೂರು ಬಾರ್ಜಗಳನ್ನು ಮಾಡಲಾಯಿತು. ಈಗ ಡಿಸೆಂಬರ್ 1995ನೇ ಇಸವಿಯಲ್ಲಿ ಈ ಸೇತುವೆ ಮರಷ್ಠಿ ಕೆಲಸ ಪ್ರಾರಂಭವಾಗಿ ಐದು ಬಾರ್ಜಗಳನ್ನು ವಾಹನಗಳ ಸಂಚಾರಕ್ಕೆ ಇರಬೇಕು, ಹಾಗೂ ಲಘು ವಾಹನಗಳನ್ನು ಈ ಸೇತುವೆಯ ಮೇಲೆ ಬಿಡಬೇಕೆಂದು ಒಪ್ಪಿಕೊಂಡು, ಆ ನಿಯಮದ ಮೇಲೆ ಅದು ಕಾರ್ಯಾಚರಣೆಗೆ ಬಂತು. ಆದರೆ ಈ ಮೂರು ನಾಲ್ಕು ತಿಂಗಳುಗಳಿಂದ ಅಲ್ಲಿ ಆರು ಬಾರ್ಜಗಳಲ್ಲಿ ಕೇವಲ ಎರಡು ಬಾರ್ಜಗಳು ಮಾತ್ರ ಕೆಲಸ ಮಾಡುತ್ತಿವೆ. ಹಾಗಾಗಿ ವಾಹನಗಳ ದಟ್ಟಣೆ ಜಾಸ್ತಿಯಾಗಿ ಎರಡು ಮೂರು ಕಿ.ಮೀ. ವಾಹನಗಳ ಉದ್ದದ ಸಾಲುಗಳು ನಿಲ್ಲುತ್ತವೆ. ಇಂದರಿಂದಾಗಿ ವಾಹನಗಳ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಅಲ್ಲದೆ ಅಲ್ಲಿರುವಂತಹ ಇಕ್ಕಟ್ಟಿನ ದಾರಿಯಲ್ಲಿ ಸಾರ್ವಜನಿಕರಿಗೂ ಕೂಡ ತೊಂದರೆಯಾಗುತ್ತಿದೆ. ಈಗ ಇರತಕ್ಕಂಥ ಎರಡು ಉಪಾಯಗಳೆಂದರೆ ಒಂದು ಬಾರ್ಜನ್ನು ಹೆಚ್ಚಿಗೆ ಒದಗಿಸಬೇಕು? ಇಲ್ಲದಿದ್ದರೆ, ಸೇತುವೆಯ ಮೇಲೆ ಕನಿಷ್ಟ 10 ಟನ್ ಭಾರದ ವಾಹನಗಳು ಹೋಗುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಈ ವಿಷಯವನ್ನು ನಾವು ಚರ್ಚೆ ಮಾಡಿದಾಗ, ನ್ಯಾಷನಲ್ ಹೈವೇಯ ಮುಖ್ಯ ಅಭಯಂತರರು ಹಾಗೂ ಬ್ರಿಡ್ಜ್‌ನ ಕಂಟ್ರಾಕ್ಟದಾರರು ನನ್ನನ್ನು ಕರೆಯಿಸಿಕೊಂಡು ಸಮಾಲೋಚನೆ ಮಾಡಿ 10 ಟನ್ ಭಾರದ ವಾಹನಗಳನ್ನು ಬಿಡುತ್ತೇವೆ. ಅದಕ್ಕೆ ಬ್ರಿಡ್ಜ ಸಫಲವಾಗಿದೆ ಎಂದು ಒಂದು ನಿರ್ಣಯಕ್ಕೆ ಬಂದೆವು. ಆದರೆ ಎರಡು ತಿಂಗಳುಗಳಾದರೂ ನಿರ್ಣಯವಾದಂತೆ ಅನುಷ್ಠಾನಗೊಳಿಸುತ್ತಿಲ್ಲ. ಹಾಗಾಗಿ ಅಲ್ಲಿಯ ಜನರು ತೊಂದರೆಗೆ ಈಡಾಗಿದ್ದಾರೆ. ಅವರು ಚಳುವಳಿಯನ್ನು ಮಾಡುವಂತಹ ಸನ್ನಿವೇಶ ಇದೆ, ಇಲ್ಲಿ ಚಳುವಳಿಯಾಗಿ ಸಾರ್ವಜನಿಕರ ಆಸ್ತಿಪಾಸ್ತಿಗೆ ನಷ್ಟವಾದ ಮೇಲೆ ಸರ್ಕಾರ ಎಚ್ಚೆತ್ತುಕೊಳ್ಳುತ್ತದೆನ್ನುವ ಒಂದು ಪ್ರತೀತಿ ಇದೆ. ಆ ಪ್ರತೀತಿಗೆ ಎಡೆ ಮಾಡಿಕೊಡದೆ, ಕೂಡಲೇ 10 ಟನ್ ಭಾರದ ವಾಹನಗಳನ್ನು ಆ ಸೇತುವೆಯ ಮೇಲೆ ಬಿಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಇಲ್ಲದಿದ್ದರೆ ಐದು ಬಾರ್ಜಗಳು ಸತತವಾಗಿ ಕೆಲಸ ಮಾಡುವುದಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮೊದಲೇ ವಿಷಯ ಹೇಳಿದ್ದರೆ, ಅದನ್ನು ಪೂರ್ತಿ ತಿಳಿದುಕೊಂಡು ಉತ್ತರ ಹೇಳುತ್ತಿದ್ದೆವು.

ಅಧ್ಯಕ್ಷರು : ಇವತ್ತು ಬೆಳಿಗ್ಗೆ ಸದನಕ್ಕೆ ಹೊರಡುವಾಗ ಐದು ನಿಮಿಷ ಇರುವಾಗಲೇ ಹೇಳಿದ್ದುದು. ಸಂಬಂಧಪಟ್ಟ ಮಂತ್ರಿಗಳು ನನ್ನ ಅನುಮತಿ ಪಡೆದುಕೊಂಡು ಬೇರೆ ಕಡೆಗೆ ಹೋಗಿದ್ದಾರೆ. ನೀವು ಯಾವುದು ಎಂದು ಮೆನಷನ್‌ಮಾಡಿದರೆ, ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ನಾಳೆ ಉತ್ತರ ಕೊಡುತ್ತಾರೆ.

(ಏ) ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಕ್ರೀಡೆಗಳಲ್ಲಿ ಒಂದಾದ ಕಂಬಳ ಕ್ರೀಡೆ ಕುರಿತು

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ್) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯಗಳಲ್ಲಿ ಒಂದಾದ ಜಾನಪದ ಕ್ರೀಡೆ, ಕಂಬಳ 1,200 ವರ್ಷಗಳಷ್ಟು ಹಿರಿತನ ಹೊಂದಿದೆ. ಹಲವು ಅರಸರ ಕಾಲದಿಂದಲೂ ಕೂಡ ರಾಜ ಮರ್ಯಾದೆಯನ್ನು ಹೊಂದಿಕೊಂಡು ಬಂದಂಥ ಈ